# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 34/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಸುರೇಶ್ ರಾವ್. ಜಿ. | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ ಹೆಸರು** | ಃ ಗಣೇಶ್ ರಾವ್ | | **06.02.2020** |
| **ವಯಸ್ಸು** | ಃ 40 ವರ್ಷ | | |
| **ವೃತ್ತಿ** | ಃ ಗ್ಯಾಸ್ ಕಂಪನಿಯಲ್ಲಿ ಕೆಲಸ | **ಪ್ರಾ.ಸಾ.** | ಃ 07 |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ 20 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಸಾಕ್ಷಿಯು ಅಮಾನತು ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತು ಮಹಜರ್ ನಿ.ಪಿ.*8* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*8(ಎ)* ಎಂದು ಗುರುತಿಸಲಾಯಿತು. ಸಹಿಯನ್ನು ದಿನಾಂಕಃ *09.08.2016* ರಂದು ಸಿ.ಸಿ.ಬಿ. ಕಚೇರಿಯಲ್ಲಿ ಎ.ಸಿ.ಪಿ. ಯವರ ಮುಂದೆ ಮಾಡಿರುತ್ತೇನೆ. ರಾಜು ಈತನ ಕೊಲೆಯಾದ ವಿಚಾರವಾಗಿ *1* ನೇ ಆರೋಪಿ ಆಬೀದ್ ಪಾಷ ಈತನು ಕಚೇರಿಯಲ್ಲಿ ಇದ್ದನು. ಅಲ್ಲಿಂದ ಆತನನ್ನು ಉದಯಗಿರಿ ಪೊಲೀಸ್ ಠಾಣೆಗೆ ನನ್ನನ್ನು ಕರೆದುಕೊಂಡು ಹೋದರು. ನಾನು ಎ.ಸಿ.ಪಿ. ಮತ್ತು ಆರೋಪಿಯ ಜೊತೆ ಹೋದೆನು. ಅಲ್ಲಿಂದ ಬೀಡಿ ಕಾಲೋನಿ ಸ್ಲಂ ಏರಿಯಾದಲ್ಲಿರುವ ಒಂದು ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಗ್ಯಾಸ್ ರೀಫೀಲ್ ಮಾಡುವ ಮನೆಗೆ ಕರೆದುಕೊಂಡು ಹೋದರು. *1* ನೇ ಆರೋಪಿತನು ಮನೆಯ ಒಳಗಡೆ ಹೋಗಿ ಬಿಳಿ ಚೀಲದಲ್ಲಿ ಕಟ್ಟಿಟ್ಟ ಒಂದು ಬ್ಯಾಗನ್ನು ತಂದು ನಮ್ಮ ಮುಂದೆ ಇಟ್ಟನು. ಅದನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಒಂದು ಬ್ಯಾಗು ಅದರ ಒಳಗಡೆ ಒಂದು ಮಚ್ಚು ಇತ್ತು. ಪೊಲೀಸರು ಸದರಿ ಮಚ್ಚು ಮತ್ತು ಬ್ಯಾಗನ್ನು ಸೀಲು ಮಾಡಿ ಅಮಾನತುಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ. ಆ ಮಚ್ಚಿಗೆ ರಕ್ತದ ಕಲೆಯಾಗಿತ್ತು. ನಮ್ಮ ಎದುರುಗಡೆ ಬರವಣಿಗೆ ಮಾಡಿ ಓದಿ ಹೇಳಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯ ಮೇಲೆ ಇರುವ ಸಹಿ ನಿ.ಪಿ.*8(ಎ)* ನಾನು ಅಲ್ಲೇ ಸಹಿ ಮಾಡಿರುತ್ತೇನೆ. ನನ್ನ ಜೊತೆ

ಚಾ.ಸಾ.*19* ಕೂಡ ಮಂಜುನಾಥ ಕೂಡ ಇದ್ದನು. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿರುವ *1* ನೇ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸೀಲು ಮಾಡಿದ್ದನ್ನು ಸಾಕ್ಷಿಗೆ ತೋರಿಸಿದ ಮಚ್ಚು ಮತ್ತು ಬ್ಯಾಗನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಮು.ಮಾ.*3* ಮತ್ತು ಮು.ಮಾ.*4* ಎಂದು ಗುರುತಿಸಲಾಯಿತು. ನಂತರ ಅಲ್ಲಿಂದ ಶಾಂತಿನಗರ ಮೈಸೂರು ಆರೋಪಿಯ ಮನೆಗೆ ಕರೆದುಕೊಂಡು ಹೋದರು. ಆರೋಪಿತನು ತನ್ನ ಮನೆಯಲ್ಲಿ ಮಂಚದ ಕೆಳಗೆ ಇಟ್ಟ ಬಟ್ಟೆಯ ಗಂಟನ್ನು ತೆಗೆದುಕೊಂಡು ಬಂದು ಅದನ್ನು ಬಿಚ್ಚಿ ನೋಡಿದಾಗ ಅದರ ಒಳಗೆ ಒಂದು ಕಪ್ಪು ಜರ್ಕಿನ್ ಇದ್ದು. ಅದನ್ನು ನಾನು ರಾಜು ಈತನಿಗೆ ಹಲ್ಲೆ ಮಾಡುವಾಗ ಧರಿಸಿದ ಜರ್ಕಿನ್ ಎಂದು ಹೇಳಿದನು. ಪೊಲೀಸರು ಅದನ್ನು ಅಮಾನತು ಪಡಿಸಿಕೊಂಡು ಪಂಚನಾಮೆ ಮಾಡಿರುತ್ತಾರೆ. ಅಮಾನತು ಪಂಚನಾಮೆಯ ಮೇಲಿರುವ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.*9* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*9(ಎ)* ಎಂದು ಗುರುತಿಸಲಾಯಿತು. ಸದರಿ ಕಪ್ಪು ಬಣ್ಣದ ಜರ್ಕಿನ್ ನನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪೂಮಾ ಎಂದು ಬರೆದಿದ್ದು ಇದ್ದು ಅದನ್ನು ಮು.ಮಾ.*5* ಎಂದು ಗುರುತಿಸಲಾಯಿತು. ಬಿಳಿ ಬಣ್ಣದ ಚೀಲವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮಾ.*6* ಎಂದು ಗುರುತಿಸಲಾಯಿತು. ನಂತರ ನಮ್ಮನ್ನು ಮತ್ತು ಆರೋಪಿಯನ್ನು ಉದಯಗಿರಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಬಿಟ್ಟರು.

<u>ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ:-</u>

. ಮೃತ ರಾಜು ನನಗೆ ಪರಿಚಯಸ್ಥನು ಇರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಕೆಲಸ ಮುಗಿಸಿಕೊಂಡು ಬಂದು ಸಿ.ಸಿ.ಬಿ. ಕಚೇರಿಯ ಸಿಗ್ನಲ್ ಹತ್ತಿರ ನಿಂತಿದ್ದೆನು. ನನ್ನ ಜೊತೆ ಮಂಜುನಾಥ ಈತನು ಕೂಡ ನಿಂತಿದ್ದೆನು. ನಮಗೆ ಕರೆದ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಆಗ ಸಮಯ ಮಧ್ಯಾಹ್ನ *1.30* ಗಂಟೆ ಆಗಿತ್ತು. ಸಿ.ಸಿ.ಬಿ. ಕಚೇರಿಯಲ್ಲಿ *1.30* ರಿಂದ *2.00* ಗಂಟೆಯವರೆಗೆ ಇದ್ದೆವು. ಸಿ,ಸಿ.ಬಿ, ಕಚೇರಿಯಲ್ಲಿ ನಾನು *2-3* ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸಿ.ಸಿ.ಬಿ. ಕಚೇರಿಯಿಂದ ಉದಯಗಿರಿಗೆ ಜೀಪಿನಲ್ಲಿ ಕರೆದುಕೊಂಡು

ಹೋದರು. ನಿಮಗೆ ಕರೆದುಕೊಂಡು ಹೋದ ಮನೆಯಲ್ಲಿ ಏನೇನಿತ್ತು ಎಂದು ಕೇಳಿದ್ದಕ್ಕೆ ಸಾಕ್ಷಿ ಮನೆಯ ಒಳಗೆ ಹೋದ ಬಲಭಾಗಕ್ಕೆ ಸ್ನಾನದ ಕೋಣೆ ಇತ್ತು ಅಲ್ಲಿಂದ ಮು.ಮಾ.*3* ಮತ್ತು *4* ಮತ್ತು *6* ಇವುಗಳನ್ನು ತೆಗೆದುಕೊಂಡು ಬಂದು ಹಾಜರುಪಡಿಸಿದರು ಎಂದು ಹೇಳುತ್ತಾರೆ. ನಾನು ಮಚ್ಚಿನ ಮೇಲೆ ಮೊದಲು ನೋಡಿದಾಗ ರಕ್ತದ ಕಲೆ ಇತ್ತು ಆದರೆ ಈಗ ರಕ್ತದ ಕಲೆ ಇರುವುದಿಲ್ಲ. ಜಪ್ತಿ ಮಾಡಿ ವಸ್ತುಗಳಿಗೆ ಸೀಲು ಮಾಡುವಾಗ ಚೀಟಿಗಳಿಗೆ ಸಹಿ ಪಡೆದುಕೊಂಡಿರುತ್ತಾರೆ. ಮಚ್ಚಿನ ಮೇಲೆ ಮತ್ತು ಬಿಳಿ ಬ್ಯಾಗಿನ ಮೇಲೆ ಸೀಲು ಮಾಡಿದ ಚೀಟಿ ಇರುವುದಿಲ್ಲ. ಆದರೆ ಸೀಲು ಮಾಡಿದ ಬಟ್ಟೆಯ ಚೀಲದ ಮೇಲೆ ಸೀಲು ಇರುತ್ತದೆ. ನಾನು ಮಹಜರ ಬರೆದ ನಂತರ ಸಹಿ ಮಾಡಿರುತ್ತೇನೆ. ಆದರೆ ನನಗೆ ಅದರಲ್ಲಿ ಏನೂ ಬರೆದಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಜರ್ಕಿನ್, ಕೋಟು ಮತ್ತು ಸ್ವೆಟರ್ ಇವುಗಳ ವ್ಯತ್ಯಾಸ ನನಗೆ ಗೊತ್ತಿರುತ್ತದೆ. ಜರ್ಕಿನ್ ಗೆ ಮಧ್ಯೆದಲ್ಲಿ ಜಿಪ್ ಇರುತ್ತದೆ ಎಂದರೆ ಸರಿ ಇದೆ, ಸ್ವೆಟರಗಳು ಓಪನ್ ಇರುತ್ತವೆ ಮತ್ತು ಕ್ಲೋಸ್ ಇರುತ್ತವೆ. ಮು.ಮಾ.*5* ಜರ್ಕಿನ್ ರಂತಹ ಜರ್ಕಿನ್ ಗಳು ಮಾರ್ಕೆಟ್ ನಲ್ಲಿ ಸಿಗುತ್ತವೆ ಎಂದರೆ ಸರಿ ಇದೆ. ಇದೇ ಜರ್ಕಿನ್ ಎಂದು ನಿನಗೆ ಗುರುತಿಸಲು ಏನಾದರೂ ಗುರುತು ಇದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ಪುಮಾ ಎಂದು ಬರೆದಿದು ಇದೆ ಎಂದು ಹೇಳುತ್ತಾರೆ. ಜರ್ಕಿನ್ ಮೇಲೆ ಸಹಿ ಮಾಡಿದ ಚೀಟಿ ಅಂಟಿಸಿದರು ಎಂದರೆ ಸರಿ ಇದೆ. ಜರ್ಕಿನ್ ಮೇಲೆ ಯಾವುದೇ ಚೀಟಿ ಇರುವುದಿಲ್ಲ. ಮಚ್ಚು ಜಪ್ತು ಮಾಡಿದ ಸ್ಥಳದಲ್ಲಿ ಒಂದೂವರೆ ಗಂಟೆ ಕಾಲ ಇದ್ದೆವು. ಬೀಡಿ ಕಾಲೋನಿಯಿಂದ ಶಾಂತಿನಗರಕ್ಕೆ ಹೋಗಲು *10* ನಿಮಿಷ ಬೇಕಾಗುತ್ತದೆ. ಸದರಿ ಶಾಂತಿನಗರದ ಕಾಲೋನಿಯ ಹತ್ತಿರಿ *4.30* ರಿಂದ *5.00* ಗಂಟೆಯವರೆಗೆ ಇದ್ದೆವು. ನಾವು ಮನೆಯ ಹತ್ತಿರ ಹೋದಾಗ ಆ ಮನೆಯಲ್ಲಿ ಯಾರು ಇದ್ದರು ಎಂಬುದನ್ನು ನಾನು ನೋಡಿರುವುದಿಲ್ಲ. ಮಹಜರ ಪೊಲೀಸರು ಬರೆದಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಪೊಲೀಸರು ಸಾಹೇಬರು ಕರೆಯುತ್ತಿದ್ದಾರೆ ಎಂದು ನಮಗೆ ಹೇಳಿದರು. ನಾವು ಸಿ.ಸಿ.ಬಿ ಕಚೇರಿಯ ಒಳಗಡೆ ಹೋದಾಗ ಎ,ಸಿ.ಪಿ. ಮಹಜರಗೆ ಕರೆದುಕೊಂಡು ಹೋಗುವ ಬಗ್ಗೆ ಹೇಳಿದರು. ಪೊಲೀಸರು ನಮ್ಮನ್ನು ಕರೆದಾಗ ನಾನು ಮತ್ತು ಮಂಜುನಾಥ ಆತನ ಸ್ಕೂಟರ್ ನ ಮೇಲೆ ಕುಳಿತಿದ್ದೆವು. ಎರಡೂ ಮನೆಯ ಉದ್ದ, ಅಗಲ ಮತ್ತು ಚಕ್ಕುಬಂದಿ ಹೇಳಲು ಬರುವುದಿಲ್ಲ.

ಶಾಂತಿನಗರದ *10* ನೇ ಕ್ರಾಸ್ ನಲ್ಲಿ ಇದ್ದ ಮನೆಗೆ ಹೋದೆವು. ಪೊಲೀಸರು ನಮ್ಮನ್ನು ಠಾಣೆಗೆ ಕರೆದು ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಮುದ್ದೆ ಮಾಲು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ:-*** ***ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*